ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಯುವಕರಿಗೆ ಉದ್ಯೋಗವಕಾಶಗಳು ಹೆಚ್ಚೆಚ್ಚು ಸೃಷ್ಟಿಯಾಗುವುದಕ್ಕೆ ನಾವು ಗಮನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, DTP Model Computer ಕೊಡಿಯೆಂದು ಕೇಳಿದ್ದೆವು, computer ಬಗ್ಗೆ ಪ್ರಸ್ತಾವನೆ ಕಳುಹಿಸಿದ ತಕ್ಷಣ ಕೊಡುತ್ತೇವೆಂಬ ಆಶ್ವಾಸನೆಯನ್ನು ಇಲ್ಲಿ ಕೊಟ್ಟಿದ್ದರು. ನಾವು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರೂ ಸಹಿತ ಅದನ್ನು ಮಂಜುರಾತಿ ಮಾಡದೇ ಪ್ರಸ್ತಾವನೆಯನ್ನು ವಾಪಸ್ಸು ಕಳುಹಿಸಿದ್ದಾರೆ. DTP Model 15 Computer ಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಇದಕ್ಕೆ ಆದೇಶವನ್ನು ಆದಷ್ಟು ಬೇಗ ಕಳುಹಿಸಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನೇ ಪುನರ್ ಪರಿಶೀಲನೆ ಮಾಡಿ ಇವೆಲ್ಲವನ್ನು up-grade ಮಾಡಬೇಕು, ಇವತ್ತಿನ ಅಗತ್ಯತೆಗೆ ತಕ್ಕಂತೆ ಎಲ್ಲಾ ವಿಜ್ಞಾನ, ತಂತ್ರಜ್ಞಾನದ ಬಳಕೆ ಮಾಡಿಕೊಳ್ಳುವುದಕ್ಕೆ ನಮ್ಮ ಯುವಕರಿಗೆ ಸಾಧ್ಯವಾಗುವಂತೆ ಪುನರ್ ರಚನೆ ಮಾಡಬೇಕೆನ್ನುವ ರೀತಿಯಲ್ಲಿ ಎಲ್ಲಾ ಅಧ್ಯಯನ ನಡೆಯುತ್ತಿವೆ, ಅವಕಾಶಗಳು ನಡೆಯುತ್ತಾ ಇವೆ. ಅದರ ಹಿನ್ನೆಲೆಯಲ್ಲಿ ಮಂಡ್ಯದ ಜೆ.ಓ.ಸಿ. ಕಾಲೇಜನ್ನು ಸಹ ಪುನರ್ ನವೀಕರಿಸಿ ಅಲ್ಲಿ ಅತ್ಯುತ್ತಮವಾದಂಥ ಕೋರ್ಸ್‌ಗಳು ನಡೆಯುವುದಕ್ಕೆ ಬೇಕಾಗಿರುವಂಥ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಜೆ.ಓ.ಸಿ. ಕೋರ್ಸ್‌ಗಳಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವಂಥ ಅಧ್ಯಾಪಕರುಗಳನ್ನು regularize ಮಾಡುವಂಥ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪರಿಶೀಲನೆಯಾಗುತ್ತಿದೆ.

ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ಥಿ

35. **ಶ್ರೀ ನಾಯ್ಕ ಜೆ.ಡಿ. (ಭಟ್ಕಳ)**:– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

1. ಭಟ್ಕಳ ವಿಧಾನ ಸಭಾ ವ್ಯಾಪ್ತಿಯ ಗ್ರಾಮೀಣ ಭಾಗದ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಮಳೆಗಾಲದಲ್ಲಿ ಪೂರ್ತಿ ಕೆಟ್ಟು ಹೊಂಡಗಳಾಗಿ,

ಕೆರೆಗಳಾಗಿ ಪರಿವರ್ತನೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

2. ಈ ರಸ್ತೆ ದುರಸ್ತಿ ಹಾಗೂ ಹೊಂಡಗಳನ್ನು ಮುಚ್ಚಲು ಸರ್ಕಾರ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಎಷ್ಟು ನಿರ್ವಹಣೆ ಅನುದಾನ ನೀಡಿದೆ ;

3. ಈ ರಸ್ತೆಗಳ ದುರಸ್ತಿ ಬಗ್ಗೆ ಸರ್ಕಾರದ ಕ್ರಮವೇನು;

4. ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ರಸ್ತೆ ದುರಸ್ತಿ ಬಗ್ಗೆ ಯಾವುದೇ ನಿರ್ವಹಣೆ ಅನುದಾನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಕುಮಾರಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

1. ಬಂದಿದೆ.

2. ಭಟ್ಕಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ 2007–08ನೇ ಸಾಲಿನಲ್ಲಿ ಒದಗಿಸಲಾದ ಅನುದಾನ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆ	ಒದಗಿಸಿದ ಅನುದಾನ
1	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ	46.00
2	12ನೇ ಹಣಕಾಸು ಆಯೋಗ ಯೋಜನೆ	81.37
3	ಗ್ರಾಮೀಣ ಸಂಪರ್ಕ (ಲೆಕ್ಕ ಶೀರ್ಷಿಕೆ–5054)	44.88
	ಒಟ್ಟು	172.25

3&4. 2008–09ನೇ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಹಾಗೂ 12ನೇ ಹಣಕಾಸು ಯೋಜನೆಯಡಿ ಒದಗಿಸಲಾದ ಅನುದಾನದಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ ಕೈಗೆತ್ತಿಕೊಳ್ಳಲು ಜಿಲ್ಲಾ

ಪಂಚಾಯತಿಗಳಿಗೆ ಅಧಿಕಾರವಿರುತ್ತದೆ.

ಶ್ರೀ ಜೆ.ಡಿ. ನಾಯ್ಕ : ಮಾನ್ಯ ಅಧ್ಯಕ್ಷರೆ, ನನ್ನ ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆಯ ಬಗ್ಗೆ ಕೇಳಿದ್ದೇನೆ. ಇಲ್ಲಿ ಮಳೆಗಾಲದಲ್ಲಿ ಎಲ್ಲಾ ರಸ್ತೆಗಳು ಹೊಂಡಗಳಾಗಿ ಅಂದರೆ ಕೆರೆಗಳಾಗಿ ಪರಿವರ್ತನೆಯಾಗುತ್ತಾ ಇದೆ. ಯಾವುದೇ ರಸ್ತೆಗಳಲ್ಲಿ ಈ ಹೊಂಡಗಳನ್ನು ತುಂಬುವಂಥಾದ್ದು, maintenance ಮಾಡುವಂಥಾದ್ದು ಆಗುತ್ತಿಲ್ಲ. ನಾನು ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗದಲ್ಲಿ ಕೇಳಿದಾಗ, ಆ ಹೊಂಡಗಳನ್ನು ತುಂಬುವಂಥಾದ್ದಕ್ಕೆ ಮತ್ತು ಪಾಟ್‌ಹೋಲ್ಸ್ ತುಂಬುವುದಕ್ಕಾಗಲಿ ನಮ್ಮಲ್ಲಿ ಯಾವುದೇ grants ಇಲ್ಲವೆಂಬ ಮಾತನ್ನು ಹೇಳುತ್ತಾ ಇದ್ದಾರೆ. ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆಂದರೆ, ಗ್ರಾಮೀಣ ಭಾಗಗಳಲ್ಲಿ ರಸ್ತೆಗಳು ಹೊಂಡಗಳಾಗಿರುವುದು ಮತ್ತು ಕೆರೆಗಳಾಗಿ ಪರಿವರ್ತನೆಯಾಗಿರುವಂಥಾದ್ದು ಗಮನಕ್ಕೆ ಬಂದಿದೆಯೆಂದು ತಿಳಿಸಿದ್ದಾರೆ. ಅದನ್ನು ಹೇಗೆ ತುಂಬುತ್ತೀರೆಂದರೆ ಅದಕ್ಕೆ ಉತ್ತರವನ್ನು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಿಂದ 46 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, 12ನೇ ಹಣಕಾಸು ಆಯೋಗ ಯೋಜನೆಯಲ್ಲಿ 81 ಲಕ್ಷ ರೂಪಾಯಿಗಳನ್ನು ಹಾಗೂ ಗ್ರಾಮೀಣ ಸಂಪರ್ಕ ಯೋಜನೆಯಲ್ಲಿ 44 ಲಕ್ಷ ರೂಪಾಯಿಗಳು ಒಟ್ಟು 172 ಲಕ್ಷ ರೂಪಾಯಿಗಳ ಅನುದಾನದ ವಿವರಗಳನ್ನು ಕೊಟ್ಟಿದ್ದಾರೆ. ಉತ್ತರ ಕರ್ನಾಟಕ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ ಇವೆಲ್ಲವನ್ನು ನಿರ್ವಹಣೆ ಮಾಡಬೇಕಾದರೆ ಅದನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಕೊಟ್ಟಿದ್ದಾರೆ. ಈಗ ಏನಾಗಿದೆಯೆಂದರೆ ನಮ್ಮ ಜಿಲ್ಲಾ ಪಂಚಾಯತ್‌ನವರು ಈಗಾಗಲೇ ಆ ಮಾರ್ಗಸೂಚಿ ಬದಲಾವಣೆಯ ಬಗ್ಗೆ ಹೈಕೋರ್ಟ್‌ಗೆ ಹೋಗಿ, ಅಲ್ಲಿ ರಿಟ್ ಅರ್ಜಿಯನ್ನು ಹಾಕಿದರು, ಅದೆಲ್ಲಾ ಇತ್ಯರ್ಥವಾಗಿ ಆ ಮಾರ್ಗಸೂಚಿಯನ್ನು ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ಆದೇಶ ಬಂದಿದೆ. ಇದು ಹೈಕೋರ್ಟ್‌ನಿಂದ ತೀರ್ಮಾನವಾಗಿ ಅಲ್ಲಿಂದ ನಿರ್ದೇಶನ ಬಂದು ಒಂದು ವರ್ಷವಾದರೂ ಸರ್ಕಾರ ಆ ಬಗ್ಗೆ ಯಾವುದೇ ಮಾರ್ಗಸೂಚಿಯನ್ನು ಮಾಡಿಲ್ಲ. ಇಲ್ಲಿ ರಸ್ತೆಗಳ ಹೊಂಡವನ್ನು ತುಂಬುವುದಕ್ಕೆ ಕೂಡ ಜಿಲ್ಲಾ ಪಂಚಾಯತ್‌ನಲ್ಲಿ ಹಣವಿಲ್ಲ, ಬಂದ ಹಣವನ್ನು ಖರ್ಚು ಮಾಡುವುದಕ್ಕೂ ಕೂಡ ಜಿಲ್ಲಾ ಪಂಚಾಯತ್‌ನಲ್ಲಿ ಯಾವುದೇ ಒಂದು ಮಾರ್ಗಸೂಚಿ ಇಲ್ಲದೇ ಇರುವುದರಿಂದ ಪ್ರಯೋಜನವಾಗುತ್ತಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಯವರನ್ನು ನಾನು ಭೇಟಿ ಮಾಡಿ ಅವರಿಗೂ ಬೇಗನೆ

ಮಾಡಿಕೊಡುವುದಕ್ಕೆ ಹೇಳಿದ್ದೇವೆ. ಜಿಲ್ಲಾ ಪಂಚಾಯತ್‌ನಲ್ಲಿ ಹೊಂಡವನ್ನು ತುಂಬುವ ಕೆಲಸಕ್ಕೆ ಹಣವಿಲ್ಲ. ದಯಮಾಡಿ ಇದರ ಬಗ್ಗೆ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕೆಂಬ ಬೇಡಿಕೆಯನ್ನು ಇಡುತ್ತೇನೆ.

ಕುಮಾರಿ ಶೋಭ ಕರಂದ್ಲಾಜೆ : ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಉತ್ತರ ಕನ್ನಡ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯವರು ನ್ಯಾಯಾಲಯಕ್ಕೆ ಹೋದ ಕಾರಣ ಆ ಭಾಗದ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆ ಜಿಲ್ಲಾ ಪಂಚಾಯತ್‌ನವರೇ ಹಿಂದೇಟು ಹಾಕಿದ ಕಾರಣ ಇವತ್ತು ಈ ಪರಿಸ್ಥಿತಿ ಆ ಭಾಗದಲ್ಲಿ ನಿರ್ಮಾಣವಾಗಿದೆ. ಇವತ್ತು ನ್ಯಾಯಾಲಯದ ಆದೇಶದಂತೆ ಹೊಸ ಮಾರ್ಗಸೂಚಿಯನ್ನು ಇನ್ನು ಒಂದು ವಾರದಲ್ಲಿ ಮಾಡುತ್ತಿದ್ದೇವೆ. ಆ ಮಾರ್ಗಸೂಚಿಯ ಪ್ರಕಾರ ಆ ಭಾಗದಲ್ಲಿ ಇರುವಂಥ ರಸ್ತೆಗಳಿಗೆ 12ನೇ ಹಣಕಾಸು ಆಯೋಗ ಮತ್ತು ಮುಖ್ಯಮಂತ್ರಿ ಗ್ರಾಮೀಣ ಸಡಕ್ ಅಭಿವೃದ್ಧಿ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದಂಥ ರಸ್ತೆಗಳ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ, ಮತ್ತೇ ಭಟ್ಕಳ ತಾಲ್ಲೂಕು ಡಾ॥ ನಂಜುಂಡಪ್ಪನವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕು ಆದ ಕಾರಣ ಆ ಭಾಗಕ್ಕೆ ನಂಜುಂಡಪ್ಪನವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕು ಆದ ಕಾರಣ ಆ ಭಾಗಕ್ಕೆ ನಂಜುಂಡಪ್ಪನವರ ವರದಿಯ ಆಧಾರದಿಂದ ವಿಶೇಷವಾದ ಅನುದಾನವನ್ನು ಕೊಡುವುದಕ್ಕೆ ಮತ್ತು ಭಟ್ಕಳ ತಾಲ್ಲೂಕಿಗೆ ನಬಾರ್ಡ್ ಯೋಜನೆ ಮುಖಾಂತರ ಸುಮಾರು 4 ಕಾಮಗಾರಿಗಳಿಗೆ 17 ಕಿ.ಮೀ. ರಸ್ತೆಗೆ, ಇಲ್ಲಿ ನಾನು ಉತ್ತರದಲ್ಲಿ ಹೇಳಿರುವಂತೆ 172 ಲಕ್ಷ ರೂಪಾಯಿಗಳು ಅಲ್ಲದೇ ನಬಾರ್ಡ್ ಯೋಜನೆ ಮುಖಾಂತರ ಸುಮಾರು 159 ಲಕ್ಷ ರೂಪಾಯಿಗಳ ಅನುಮೋದನೆಯಾಗಿರುತ್ತದೆ. ಇದರಲ್ಲಿ 17 ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಿದೆ, ಮತ್ತೇ ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ ಮುಖಾಂತರ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಕಾಮಗಾರಿಗಳು ಪೂರ್ಣಗೊಂಡಿದೆ. 7ನೇ ಹಂತದ ಯೋಜನೆಯಲ್ಲಿ ಸುಮಾರು ಆರೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಭಟ್ಕಳ ತಾಲ್ಲೂಕಿನ ರಸ್ತೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿದೆ, ಮತ್ತೆ ಗುತ್ತಿಗೆ ಪ್ರಕ್ರಿಯೆ ಚಾಲನೆಯಲ್ಲಿದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಒಂದು ಸೆಕೆಂಡ್ ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಭಟ್ಕಳಕ್ಕೆ ಸಂಬಂಧಪಟ್ಟಂತೆ ಕೇಳಿದ್ದಾರೆ. ಈಗ ಬಹಳಷ್ಟು ಸಮಯವಾಗಿದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಒಂದೇ ಸೆಕೆಂಡ್, ತಾವೇ ಇಷ್ಟು ಬಿಗಿಯಾದರೆ ಹೇಗೆ ? ನಾನು ಕೇಳುವುದೇನೆಂದರೆ, 12th Finance ಇದೆಯಲ್ಲಾ, ಇದರ ಬಗ್ಗೆ ಕಳೆದ ವರ್ಷ ಸರ್ಕಾರಕ್ಕೆ ಮತ್ತು ಜಿಲ್ಲಾ ಪಂಚಾಯತ್‌ನವರಿಗೆ ಸಂಘರ್ಷವಾಗಿ ಅವರು ಕೋರ್ಟ್‌ಗೆ ಹೋಗಿ, ಅಲ್ಲಿ ಜಿಲ್ಲಾ ಪಂಚಾಯತ್‌ನ ಸದಸ್ಯರ ಪರವಾಗಿ ತೀರ್ಪು ಕೊಟ್ಟರು. ಅದರ ಮೇಲೆ ಮತ್ತೆ ಇವರು ಅಪೀಲು ಹಾಕಿದ್ದಾರೆ. ಕಳೆದ ವರ್ಷ 12ನೇ ಹಣಕಾಸು ಆಯೋಗದ ಒಂದು ಪೈಸೆಯನ್ನು ಖರ್ಚು ಮಾಡಿಲ್ಲ. ಈ ವರ್ಷವೂ ಆ ಕೇಸ್ ಪೆಂಡಿಂಗ್‌ನಲ್ಲಿದೆ.

ಕುಮಾರಿ ಶೋಭ ಕರಂದ್ಲಾಜೆ : ಎರಡೂ ಜಿಲ್ಲೆಗಳದ್ದು ಇದೆ.

ಶ್ರೀ ಸಿದ್ಧರಾಮಯ್ಯ : ನಾನು ಮೈಸೂರು ಜಿಲ್ಲೆಯ ಬಗ್ಗೆ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಮೈಸೂರು ಮತ್ತು ಉತ್ತರ ಕನ್ನಡ ಜಿಲ್ಲೆಯದು...

ಶ್ರೀ ಸಿದ್ಧರಾಮಯ್ಯ : ಮೈಸೂರು ಮತ್ತು ಉತ್ತರ ಕನ್ನಡ ಜಿಲ್ಲೆಯವರು ಕೋರ್ಟ್‌ಗೆ ಹೋಗಿದ್ದಾರಲ್ಲಾ, ನಮ್ಮ ಜಿಲ್ಲೆಯಲ್ಲಿ ಅಭಿವೃದ್ಧಿಯಾಗಬೇಕಲ್ಲಾ, ಕೆಲಸ ಆಗಬೇಕಾ, ಬೇಡವಾ? ತಾವು ಅಲ್ಲಿಗೆ ಜಿಲ್ಲಾ ಮಂತ್ರಿಗಳಾಗಿದ್ದೀರಿ. ಅಲ್ಲಿ ಇವರು ಮತ್ತೆ ಕೋರ್ಟ್‌ಗೆ ಹೋಗಿದ್ದಾರೆ. ಈಗ ನೀವು ದುಡ್ಡನ್ನು ಖರ್ಚು ಮಾಡುವ ಹಾಗೆ ಇಲ್ಲ, ಕೆಲಸವೂ ಆಗುವ ಹಾಗೆ ಇಲ್ಲ. ತಾವು ಜಿಲ್ಲಾ ಪಂಚಾಯತ್‌ನವರನ್ನು ಕರೆಸಿಕೊಂಡು ಅವರೊಂದಿಗೆ ಕುಳಿತು ಚರ್ಚೆ ಮಾಡಿ, ಅದನ್ನು ಏನು ಮಾಡಬೇಕೆಂದು ತೀರ್ಮಾನ ಮಾಡಬೇಕಲ್ಲವೇ ? ನೀವು ಕೋರ್ಟ್‌ನಲ್ಲಿ ಜಿಲ್ಲಾ ಪಂಚಾಯತ್‌ನವರೊಂದಿಗೆ ಕುಸ್ತಿ ಮಾಡಿಕೊಂಡು ಕುಳಿತುಕೊಳ್ಳುತ್ತೀರಾ ? ತಾವು ಒಂದು ಕಡೆ De-centralization ಎಂದು ಹೇಳುತ್ತೀರಿ, ಒಂದು ಕಡೆ ಅಧಿಕಾರ ವಿಕೇಂದ್ರೀಕರಣವೆಂದು ಹೇಳುತ್ತೀರಿ, ಇನ್ನೊಂದು ಕಡೆ ಅಧಿಕಾರ ಕೇಂದ್ರೀಕರಣ ಮಾಡುತ್ತೀರಿ. ತಾವು ಯಾವುದರ ಪರವಿದ್ದೀರೆಂದು ಗೊತ್ತಾಗಬೇಕಲ್ಲಾ? ಅದು ಅಧಿಕಾರ ವಿಕೇಂದ್ರೀಕರಣದ ಪರವೋ, ಕೇಂದ್ರೀಕೃತ ವ್ಯವಸ್ಥೆಯ ಪರವೋ, ತಾವು ಯಾವುದರ ಪರವಿದ್ದೀರೆಂದು ಗೊತ್ತಾಗಬೇಕಲ್ಲಾ, ಕೋರ್ಟ್‌ನಲ್ಲಿ ಇಂಥಾದ್ದೆಲ್ಲಾ ಇತ್ಯರ್ಥ ಸಾಧ್ಯವಾಗುವುದಿಲ್ಲ. ಅದಕ್ಕೆ

ಕೂಡಲೇ across the table ಕರೆದು ಚರ್ಚೆ ಮಾಡಿ ಇದನ್ನು ಇತ್ಯರ್ಥ ಮಾಡಬೇಕು, ಮತ್ತೆ ಕಳೆದ ವರ್ಷ ಏನು ಹಣ ಖರ್ಚು ಆಗಿಲ್ಲ, ಆ ಹಣ ಮತ್ತು ಈ ವರ್ಷದ್ದು ಒಟ್ಟಿಗೆ ಸೇರಿ ವರ್ಷ ಖರ್ಚು ಮಾಡಬೇಕು. ಆ ರೀತಿ ಕೂಡಲೇ ತೀರ್ಮಾನ ಮಾಡಬೇಕು.

ಶ್ರೀ ಜೆ.ಡಿ.ನಾಯ್ಕ : ಮಾನ್ಯ ಅಧ್ಯಕ್ಷರೆ, ಈಗ ಕೋರ್ಟ್‌ನಿಂದ ನಿರ್ದೇಶನ ಮಾಡಿ, ಇಷ್ಟು ಹಣವನ್ನು ರಿಲೀಜ್ ಮಾಡಬೇಕೆಂದು ಕೋರ್ಟ್‌ನವರು direction ಕೊಟ್ಟಿದ್ದಾರೆ, ಆ direction ಪ್ರಕಾರ ಈಗ ಹೊಂಡವನ್ನು ಮುಚ್ಚುವುದಕ್ಕೆ ಆಗುತ್ತಿಲ್ಲ. ಇಲ್ಲಿ ರಸ್ತೆಗಳು ಹೊಂಡಗಳಾಗಿವೆ, ಇದಕ್ಕೆ ಮಾರ್ಗಸೂಚಿಯಲ್ಲಿ ಅನುಕೂಲ ಮಾಡಿಕೊಟ್ಟರೆ ಮಾತ್ರ ಆಗುತ್ತದೆ. ಇಲ್ಲದಿದ್ದರೆ ಇರುವ ಮಾರ್ಗ ಸೂಚಿಯಲ್ಲಿ ಹೊಸ ರಸ್ತೆಯನ್ನು ಮಾಡಬಹುದು, ಡಾಂಬರ್ ರಸ್ತೆ ಮಾಡಬಹುದೇ ಹೊರತಾಗಿ ಹೊಂಡವನ್ನು ಮುಚ್ಚುವುದಕ್ಕಾಗಲಿ, ಮಣ್ಣು ರಸ್ತೆಯನ್ನು ಡಾಂಬರ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಮಂತ್ರಿಯವರು, ಉತ್ತರ ಕೊಡುತ್ತಾರೆ.

ಕುಮಾರಿ ಶೋಭ ಕರಂದ್ಲಾಜೆ : ಮಾನ್ಯ ಅಧ್ಯಕ್ಷರೆ, ಸರ್ಕಾರ ವಿಕೇಂದ್ರಿಕರಣ ವ್ಯವಸ್ಥೆಯ ಪರವಾಗಿದೆ, ಮತ್ತು ವಿಕೇಂದ್ರಿಕರಣ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ವಿಶೇಷವಾದ ಆದ್ಯತೆಯನ್ನು ಕೂಡ ನಮ್ಮ ಸರ್ಕಾರ ಕೊಡುತ್ತದೆಂಬ ಮಾತನ್ನು ಸದನಕ್ಕೆ ತಿಳಿಯಪಡಿಸುತ್ತೇನೆ. ಕಳೆದ ಬಾರಿ ಮತ್ತು ಈ ಬಾರಿ ಏನು ಬಾಕಿ ಉಳಿದಿದೆ, ಅದು 2–3 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿ 12ನೇ ಹಣಕಾಸು ಆಯೋಗದ ಹಣವನ್ನು ಬಳಕೆ ಮಾಡಿಕೊಳ್ಳಲಾಗಿದೆ. ಮೈಸೂರು ಮತ್ತು ಉತ್ತರ ಕನ್ನಡ ಜಿಲ್ಲೆಯವರು ಕೋರ್ಟಿಗೆ ಹೋಗಿದ್ದಾರೆ, ಆ ಕಾರಣಕ್ಕೆ ಈ ಜಿಲ್ಲೆಗಳಲ್ಲಿ ಈ ಹಣದ ಉಪಯೋಗವಾಗಿಲ್ಲ. ಆದರೆ ಇನ್ನು ಒಂದು ವಾರದೊಳಗೆ, ಅವರೆಲ್ಲರನ್ನೂ ಕರೆದು, amicable ರೀತಿಯಲ್ಲಿ ಒಂದು ಮಾತುಕತೆಯನ್ನು ಮಾಡಿ, ಈ ಕೋರ್ಟಿನ ಆದೇಶದಂತೆ ನಾವು ವಿಶೇಷವಾಗಿ ಆದ್ಯತೆ ಕೊಟ್ಟು, ಗೌರವ ಕೊಟ್ಟು ಕೆಲಸ ಮಾಡಲಿಕ್ಕೆ ನಾವು ಬದ್ಧರಿದ್ದೇವೆ.